## ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಬೆಂಗಳೂರು ಇವರ ಕಚೇರಿ ಆದೇಶದ ಉದ್ದರಣ

ಕಚೇರಿ ಆದೇಶ ಸಂಖ್ಯೆ: 237/2019–20 ದಿನಾಂಕ: 16 –11–2019

**ವಿಷಯ:** ವಲಯ ಅರಣ್ಯಾಧಿಕಾರಿ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಅಪಜೀ 297 ಅಅಸೇ 2016 ದಿನಾಂಕ: 30.11.2017
2. ಈ ಕಚೇರಿ ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–3/2017–18 ದಿನಾಂಕ: 24.03.2018
3. ಈ ಕಚೇರಿಯ ಅಂತಿಮ ಆಯ್ಕೆ ಪಟ್ಟಿಯ ಪ್ರಕಟಣೆ ಸಂಖ್ಯೆ: ಬಿ9–ವಅಅ–ವಿವ–3/17–18 ದಿನಾಂಕ: 06.07.2019
4. ಡೈರೆಕ್ಟರ್ ಫಾರೆಸ್ಟ್ ಎಜುಕೇಷನ್, ಡೆಹ್‌ರಾಡೂನ್ ಇವರ ಪತ್ರ ಸಂಖ್ಯೆ: 4-820/Trg.II/DFT-2019/2655-59 ದಿನಾಂಕ: 17.10.2019
5. ವೃಂದ ಮತ್ತು ನೇಮಕಾತಿ ನಿಯಮದ ಅಧಿಸೂಚನೆ ಸಂಖ್ಯೆ: ಅಪಜೀ 366 ಅಪಸೇ 2010 ದಿನಾಂಕ: 06.09.2012
6. ಸರ್ಕಾರದ ಆದೇಶ ಸಂಖ್ಯೆ: ಅಪಜೀ 231 ಅಅಸೇ 2018 ದಿನಾಂಕ 26.08.2019

* * * * * *

**ಪ್ರಸ್ತಾವನೆ:**

73 ವಲಯ ಅರಣ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರವು ಉಲ್ಲೇಖ (1) ರ ಪತ್ರದಲ್ಲಿ ಅನುಮತಿ ನೀಡಿರುತ್ತದೆ. ಅದರಂತೆ ಉಲ್ಲೇಖ (2) ರ ಈ ಕಛೇರಿಯ ಅಧಿಸೂಚನೆಯಲ್ಲಿ 73 ವಲಯ ಅರಣ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲಾಗಿತ್ತು.

ಕರ್ನಾಟಕ ಅರಣ್ಯ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ವಲಯ ಅರಣ್ಯಾಧಿಕಾರಿ ಹುದ್ದೆಯ ನೇಮಕಾತಿ ಪ್ರಕ್ರಿಯೆಗಳನ್ನು ನಿಯಮಾನುಸಾರ ಪೂರ್ಣಗೊಳಿಸಲಾಗಿದೆ. ಉಲ್ಲೇಖ (3) ರಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿರುತ್ತದೆ.

ಉಲ್ಲೇಖ (4) ರ ಪತ್ರದಲ್ಲಿ ಡೈರೆಕ್ಟರ್ ಫಾರೆಸ್ಟ್ ಎಜುಕೇಷನ್, ಡೆಹ್‌ರಾಡೂನ್ ಇವರು Uttarakhand Forestry Training Academy, Haldwani (Uttarakhand) ತರಬೇತಿ ಕೇಂದ್ರದಲ್ಲಿ ದಿನಾಂಕ: 25.11.2019 ರಿಂದ ಪ್ರಾರಂಭವಾಗುವ 18 ತಿಂಗಳ ತರಬೇತಿಗೆ ಕರ್ನಾಟಕ ಅರಣ್ಯ ಇಲಾಖೆಯಿಂದ ಆಯ್ಕೆಗೊಂಡ ಅಭ್ಯರ್ಥಿಗಳ ಪೈಕಿ 19 ಅಭ್ಯರ್ಥಿಗಳನ್ನು ನಿಯೋಜಿಸಿ, ಹಂಚಿಕೆ ಮಾಡಿರುತ್ತಾರೆ. ವೃತ್ತಿ ತರಬೇತಿಗೆ ನಿಯೋಜಿಸುವ ಮೊದಲು ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮದಂತೆ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ವಲಯ ಅರಣ್ಯಾಧಿಕಾರಿ ಹುದ್ದೆಗೆ ನೇಮಕಾತಿ ಆದೇಶ ನೀಡಬೇಕಾಗಿರುತ್ತದೆ.

ನೇಮಕಾತಿ ಆದೇಶ ನೀಡುವ ಮೊದಲು ಪ್ರತಿ ಅಭ್ಯರ್ಥಿಯ ಶೈಕ್ಷಣಿಕ ವಿದ್ಯಾರ್ಹತೆಯ ಕುರಿತು ಅಭ್ಯರ್ಥಿ ನೀಡಿರುವ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಗ್ರಾಮೀಣ, ಕನ್ನಡ ಮಾಧ್ಯಮ ಪ್ರಮಾಣ ಪತ್ರಗಳ ನೈಜತೆಯ ಕುರಿತು ಪರಿಶೀಲನೆ ನಡೆಸಬೇಕಾಗಿರುತ್ತದೆ ಮತ್ತು ಸದರಿ ಅಭ್ಯರ್ಥಿಗಳ ವಿರುದ್ಧ ಯಾವುದೇ ಪೋಲೀಸ್ ಮೊಕದ್ದಮೆ ಇಲ್ಲದೆ ಇರುವ ಕುರಿತು ಪೋಲೀಸ್ ಇಲಾಖೆಯಿಂದ ಮಾಹಿತಿ ಪಡೆಯಬೇಕಾಗಿರುತ್ತದೆ. ಈಗಾಗಲೇ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ವ್ಯವಹಾರ ನಡೆಸಲಾಗಿರುತ್ತದೆ. ಎಲ್ಲಾ ಇಲಾಖೆಗಳಿಂದ ಅಭ್ಯರ್ಥಿಗಳ ಕುರಿತು ಪೂರ್ಣ ವರದಿ ಲಭ್ಯವಾಗಿರುವುದಿಲ್ಲ. ಆದಾಗ್ಯೂ, ಈಗಾಗಲೇ ಭಾರತ ಸರ್ಕಾರ ಅಭ್ಯರ್ಥಿಗಳಿಗೆ 18 ತಿಂಗಳ ವೃತ್ತಿ ತರಬೇತಿಗಾಗಿ ವೇಳಾ ಪಟ್ಟಿಯನ್ನು ಬಿಡುಗಡೆ ಮಾಡಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಎಲ್ಲಾ ಅಭ್ಯರ್ಥಿಗಳಿಂದ ರೂ. 100/– ರ ಛಾಪಾ ಕಾಗದದಲ್ಲಿ ಸೂಕ್ತ ಕರಾರು ಪತ್ರವನ್ನು ಅಭ್ಯರ್ಥಿಗಳಿಂದ ಪಡೆದು, ಈ ಕರಾರನ್ನು ನೋಟರಿ ಮಾಡಿಸಲಾಗಿರುತ್ತದೆ.

ಸದರಿ ಕರಾರು ಪತ್ರದಲ್ಲಿ ಒಂದು ವೇಳೆ ಮೇಲೆ ತಿಳಿಸಿರುವ ಯಾವುದೇ ಪ್ರಮಾಣ ಪತ್ರದ ಸತ್ಯಾಪನೆಯಲ್ಲಿ ಅಭ್ಯರ್ಥಿಯ ವಿರುದ್ಧ ಪ್ರತಿಕೂಲ ಷರಾ ಇದ್ದಲ್ಲಿ ಅಂತಹ ಅಭ್ಯರ್ಥಿಯನ್ನು ವಲಯ ಅರಣ್ಯಾಧಿಕಾರಿ ಹುದ್ದೆಯ ಸೇವೆಯಿಂದ ಯಾವುದೇ ಮುನ್ಸೂಚನೆ ಇಲ್ಲದೆ ವಜಾಗೊಳಿಸಲಾಗುವುದು. ಸದರಿ ಅಭ್ಯರ್ಥಿಯನ್ನು ಮುಂದೆ ಯಾವುದೇ ಸರ್ಕಾರಿ ನೌಕರಿಗೆ ಸೇರದಂತೆ ನಿಷೇಧಿಸಲಾಗುವುದು. ಕ್ರಿಮಿನಲ್ ಪ್ರಕರಣವನ್ನು ನ್ಯಾಯಾಲಯದಲ್ಲಿ ದಾಖಲಿಸಲಾಗುವುದು ಹಾಗೂ ತರಬೇತಿಗೆ ಕರ್ನಾಟಕ ಅರಣ್ಯ ಇಲಾಖೆಯಿಂದ ಭರಿಸಲಾದ ಪೂರ್ಣ ವೆಚ್ಚವನ್ನು ಹಿಂಪಾವತಿಸಲು ಬದ್ಧರಾಗಿರುವ ಅಭ್ಯರ್ಥಿಯಿಂದ ಹಾಗೂ ಇಬ್ಬರು ಸರ್ಕಾರಿ ಹುದ್ದೆಯಲ್ಲಿರುವ ನೌಕರರಿಂದ ಒಪ್ಪಿಗೆಯನ್ನು ಪಡೆಯಲಾಗಿರುತ್ತದೆ. ಅದರಂತೆ ಕ್ರಮ ಕೈಗೊಳ್ಳಲಾಗುವುದು. ಇದಲ್ಲದೆ, ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ಉಪ ನಿಯಮ 20 ರಂತೆ ಅಪರಾಧಿ ವ್ಯವಹರಣೆಗೆ ಒಳಪಡಿಸಲಾಗುವುದು ಎಂದು ಷರತ್ತನ್ನು ವಿಧಿಸಲಾಗಿರುತ್ತದೆ ಹಾಗೂ ಈ ನೇಮಕಾತಿ ಆದೇಶವು ಈ ಕರಾರಿಗೆ ಒಳಪಟ್ಟಿರುತ್ತದೆ.

ಉಲ್ಲೇಖ (5) ರಲ್ಲಿ ಹೇಳಿದ ಕರ್ನಾಟಕ ಅರಣ್ಯ ಇಲಾಖೆ ವೃಂದ ಮತ್ತು ನೇಮಕಾತಿ ನಿಯಾಮಾವಳಿಯ ನಿಯಮಗಳಂತೆ ನೇರ ನೇಮಕಾತಿಯಲ್ಲಿ ಆಯ್ಕೆಗೊಂಡಿರುವ ವಲಯ ಅರಣ್ಯಾಧಿಕಾರಿಗಳಿಗೆ ಮೂರು ವರ್ಷಗಳ ಪರೀಕ್ಷಾರ್ಥ ಅವಧಿಯ ಮೇಲೆ ನೇಮಕ ಮಾಡಿ ಈ ಪರೀಕ್ಷಾರ್ಥ ಅವಧಿಯಲ್ಲಿ 1½ ವರ್ಷದ ತರಬೇತಿಯನ್ನು ಮತ್ತು 6 ತಿಂಗಳ ವೃತ್ತಿ ತರಬೇತಿಯನ್ನು ಪಡೆಯಬೇಕಾಗಿರುತ್ತದೆ ಮತ್ತು ಈ ವಲಯ ಅರಣ್ಯಾಧಿಕಾರಿಗಳು ಒಂದು ವರ್ಷದ ಕಾಲ ಸ್ವತಂತ್ರವಾಗಿ ವಲಯ ಅರಣ್ಯಾಧಿಕಾರಿ ಹುದ್ದೆಯನ್ನು ನಿರ್ವಹಿಸಬೇಕಾಗಿರುತ್ತದೆ.

ಉಲ್ಲೇಖ (6) ರ ಸರ್ಕಾರದ ಆದೇಶದಲ್ಲಿ ಸರ್ಕಾರವು ನೇರ ನೇಮಕಾತಿಯಿಂದ ಆಯ್ಕೆಗೊಂಡ ನಂತರ ತರಬೇತಿಗಾಗಿ ನಿಯೋಜಿಸುವ ಅವಧಿಗೆ ವೇತನ, ಭತ್ಯೆ ಇತ್ಯಾದಿಗಳನ್ನು ಪಾವತಿಸುವ ಸಲುವಾಗಿ 73 ವಲಯ ಅರಣ್ಯಾಧಿಕಾರಿ ಹುದ್ದೆಗಳನ್ನು ಸಂಖ್ಯಾತಿರಿಕ್ತ ಹುದ್ದೆಯನ್ನಾಗಿ ಒಟ್ಟು 24 ತಿಂಗಳ ಅವಧಿಗೆ ತಾತ್ಕಾಲಿಕವಾಗಿ ಸೃಜಿಸಿ ಆದೇಶಿಸಲಾಗಿದೆ.

ಈ ಕೆಳಕಂಡ 18 ಅಭ್ಯರ್ಥಿಗಳಿಗೆ ವಲಯ ಅರಣ್ಯಾಧಿಕಾರಿ ಹುದ್ದೆಗೆ ನೇಮಕಾತಿ ನೀಡುವ ಸಲುವಾಗಿ ಈ ಕೆಳಕಂಡ ಆದೇಶ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಉಲ್ಲೇಖ (3) ರಲ್ಲಿ ವಲಯ ಅರಣ್ಯಾಧಿಕಾರಿ ಹುದ್ದೆಗೆ ಆಯ್ಕೆಗೊಂಡ ಹಾಗೂ ಉಲ್ಲೇಖ (4) ರಲ್ಲಿ ಡೈರೆಕ್ಟರ್ ಫಾರೆಸ್ಟ್ ಎಜುಕೇಷನ್, ಡೆಹ್‌ರಾಡೂನ್ ಇವರು ದಿನಾಂಕ: 25.11.2019 ರಿಂದ ಪ್ರಾರಂಭವಾಗುವ ತರಬೇತಿಗೆ ನಿಯೋಜಿಸಲ್ಪಟ್ಟ ಈ ಕೆಳಕಂಡ ಅಭ್ಯರ್ಥಿಗಳನ್ನು ಮೂರು ವರ್ಷಗಳ ಪರೀಕ್ಷಾರ್ಥ ಅವಧಿಯ ಮೇಲೆ ವಲಯ ಅರಣ್ಯಾಧಿಕಾರಿ ಹುದ್ದೆಗೆ ನೇಮಿಸಿ, ವೇತನ ಶ್ರೇಣಿ ರೂ. 40900-1100-46400-1250-53900-1450-62600-1650-72500-1900-78200 ರಲ್ಲಿ ವಲಯ ಅರಣ್ಯಾಧಿಕಾರಿ ಹುದ್ದೆಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನೇಮಕ ಮಾಡಿದೆ. ಈ ಆದೇಶವು ಈ ತಕ್ಷಣದಿಂದ ಜಾರಿಗೆ ಬರುತ್ತದೆ.

| ಕ್ರ ಸಂ | ಅಭ್ಯರ್ಥಿಯ ಹೆಸರು ಶ್ರೀಯುತ/ಕು: | ಹುಟ್ಟಿದ ದಿನಾಂಕ | ನೇಮಕ ಮಾಡಿದ ಹುದ್ದೆಯ ಹೆಸರು |
|---|---|---|---|
| 1 | Sh. Bharath U G | 21-05-1996 | ವಲಯ ಅರಣ್ಯಾಧಿಕಾರಿ, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಡ |
| 2 | Sh. Nithin Ballavar J N | 12-06-1995 | |
| 3 | Ms. Akshatha I B | 29-04-1995 | |
| 4 | Sh. Praveen P E | 31-07-1995 | |
| 5 | Sh. Pramod A | 16-04-1996 | |
| 6 | Sh. Muhammed Zeeshan | 01-12-1996 | |
| 7 | Sh. Mahesh Manjappa Devadig | 04-02-1995 | |
| 8 | Sh. Pradeepa N | 04-01-1994 | |
| 9 | Sh. Prashanth Ganapathi Naik | 24-03-1993 | |
| 10 | Sh. Ravi Burji | 08-08-1995 | |
| 11 | Ms. Shruthi B | 18-07-1995 | |
| 12 | Ms. Amruta A. Mayappanavar | 03-05-1995 | |
| 13 | Ms. Pooja Yaligar | 14-06-1996 | |
| 14 | Sh. Naresh V | 09-10-1994 | |
| 15 | Ms. Prafulla K P | 15-04-1995 | |

| ಕ್ರ ಸಂ | ಅಭ್ಯರ್ಥಿಯ ಹೆಸರು ಶ್ರೀಯುತ/ಕು: | ಹುಟ್ಟಿದ ದಿನಾಂಕ | ನೇಮಕ ಮಾಡಿದ ಹುದ್ದೆಯ ಹೆಸರು |
|---|---|---|---|
| 16 | Sh. Rathod Sunil | 19-08-1995 | ವಲಯ ಅರಣ್ಯಾಧಿಕಾರಿ, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಡ |
| 17 | Sh. Punith Kumara D | 10-06-1995 | |
| 18 | Sh. Syed Nadeem | 23-08-1995 | |

<u>ಸೂಚನೆಗಳು:</u>

1. ಮೇಲೆ ಹೇಳಿದ ಎಲ್ಲಾ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ತಮಗೆ ನೇಮಿಸಿದ ಹುದ್ದೆಗಳಲ್ಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಡ ಇವರ ಎದುರು ದಿನಾಂಕ: 18.11.2019 ರಂದು ಪೂರ್ವಾಹ್ನ ಹಾಜರಾಗತಕ್ಕದು.

2. ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ–ಎಸ್‌ಪಿಎಲ್–04–ಪಿಇಟಿ–2005 ದಿನಾಂಕ 31–3–2006 ರಂತೆ ಅಂಶದಾಯಿ ನಿವೃತ್ತಿ ಯೋಜನೆ (Contributory Pension Scheme) ಗೆ ಈ ನೇಮಕಾತಿಯಲ್ಲಿ ಆಯ್ಕೆಯಾದ ವಲಯ ಅರಣ್ಯಾಧಿಕಾರಿಗಳು ಬದ್ಧರಾಗಿರತಕ್ಕದ್ದು.

3. ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳ ಸೇವಾ ವಹಿಯನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಡ ಇವರು ಕೂಡಲೇ ತೆರೆದು ಕಾಲಕಾಲಕ್ಕೆ ಅವರ ಸೇವಾ ವಿವರಗಳನ್ನು ಹಾಗೂ ತರಬೇತಿ ವಿವರಗಳನ್ನು ದಾಖಲಿಸುವುದು ಹಾಗೂ ವೇತನ, ಭತ್ಯೆ ಇತ್ಯಾದಿ ಪಾವತಿಸುವುದು.

4. ಹದಿನೆಂಟು ತಿಂಗಳ ವೃತ್ತಿ ತರಬೇತಿ ಮುಗಿದ ನಂತರ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಡ ಇವರು ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ವೃತ್ತಿ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಬಗ್ಗೆ ಅಸೆಸ್‌ಮೆಂಟ್ ರಿಪೋರ್ಟನ್ನು ನಿಗಧಿತ ನಮೂನೆಯಲ್ಲಿ ಬರೆದು ಈ ಕಛೇರಿಗೆ ಸಲ್ಲಿಸುವುದು.

5. ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ಪ್ರಸ್ತುತ ನೇಮಿಸಿದ ಹುದ್ದೆಯಲ್ಲಿ lein ಉಳಿಸಿಕೊಂಡು ವೃತ್ತಿ ತರಬೇತಿಯ ಅವಧಿಯಲ್ಲಿ ಅವರಿಗೆ ವೇತನ ಹಾಗೂ ಭತ್ಯೆಗಳನ್ನು ಮೂಲ ಹುದ್ದೆಯಿಂದಲೇ ಪಾವತಿಸತಕ್ಕದ್ದು.

6. ವೃತ್ತಿ ತರಬೇತಿ ಅವಧಿ ಹಾಗೂ ಪರೀಕ್ಷಾರ್ಥ ಅವಧಿಯಲ್ಲಿ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿ ಸೇವೆಯು ತೃಪ್ತಿಕರವಾಗಿಲ್ಲದಿದ್ದಲ್ಲಿ, ಪರೀಕ್ಷಾರ್ಥ ನಿಯಮಗಳ ಅನುಸಾರ ಸೇವೆಯಿಂದ ತೆಗೆದುಹಾಕಲಾಗುವುದು.

7. ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ಕಡ್ಡಾಯವಾಗಿ 5 ವರ್ಷಗಳ ಸೇವೆಯನ್ನು ಅರಣ್ಯ ಇಲಾಖೆಯಲ್ಲಿ ಪೂರ್ಣಗೊಳಿಸಬೇಕು. ಒಂದು ವೇಳೆ 5 ವರ್ಷದ ಮೊದಲೇ ಹುದ್ದೆಯನ್ನು ತ್ಯಜಿಸಿದಲ್ಲಿ ಅಥವಾ ಯಾವುದೇ ಕಾರಣಕ್ಕೆ ಅವರನ್ನು ಹುದ್ದೆಯಿಂದ ತೆಗೆದು ಹಾಕಿದಲ್ಲಿ ಪರೀಕ್ಷಾರ್ಥ ವಲಯ ಅರಣ್ಯ ಅಧಿಕಾರಿಗಳು ತರಬೇತಿ ಪೂರ್ವ ಇಲಾಖೆಗೆ ಸಲ್ಲಿಸಿರುವ ನಷ್ಟಬಂಧಿ ಪತ್ರದಲ್ಲಿನ ಷರತ್ತಿನ ಪ್ರಕಾರ (Indemnity Bond) ಇವರಿಗೆ ವಲಯ ಅರಣ್ಯಾಧಿಕಾರಿ ಹುದ್ದೆಯ ತರಬೇತಿ ನೀಡಲು ಸರ್ಕಾರವು ವೆಚ್ಚ ಮಾಡಿದ ಹಣವನ್ನು ಶೇಕಡ 8 ರಷ್ಟು ಬಡ್ಡಿ ದರದಂತೆ ವಸೂಲು ಮಾಡಲಾಗುವುದು.

8. ತರಬೇತಿಯ ಅವಧಿಯಲ್ಲಿ ಸರ್ಕಾರವು ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ ರೂ. 70,000/– ಗಳನ್ನು ಸಾಧನ ಸಾಮಗ್ರಿ ವೆಚ್ಚಗಳಿಗಾಗಿ ನೀಡಿದ್ದು, ಸದರಿ ಹಣದಲ್ಲಿ ಶೇಕಡಾ 50 ರಷ್ಟು ಹಣವನ್ನು ಅಂದರೆ ರೂ. 35,000/– ಗಳನ್ನು ಅಭ್ಯರ್ಥಿಗಳು ಸರ್ಕಾರಕ್ಕೆ ಹಿಂದಿರುಗಿಸಬೇಕಾಗಿರುತ್ತದೆ. ಅದುದರಿಂದ ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿ (ಡಿ.ಡಿ.ಓ.) ಮೇಲಿನ ಮೊತ್ತವನ್ನು 10 ಕಂತುಗಳಲ್ಲಿ ತಿಂಗಳಿಗೆ ರೂ. 3,500/– ರಂತೆ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳ ಮೊದಲನೇ ತಿಂಗಳ ವೇತನದಿಂದಲೇ ಕಡಿತಗೊಳಿಸಿ ಸರ್ಕಾರಕ್ಕೆ ಜಮಾ ಮಾಡುವುದು.

9. ಉಲ್ಲೇಖ (3) ರಲ್ಲಿ ಒಟ್ಟು 73 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟಗೊಂಡಿರುತ್ತದೆ. ಆಯ್ಕೆಗೊಂಡ 73 ಅಭ್ಯರ್ಥಿಗಳ ಪರಸ್ಪರ ಜೇಷ್ಠತೆಯು ಈ ಆಯ್ಕೆ ಪಟ್ಟಿಗೆ ಒಳಪಟ್ಟಿರುತ್ತದೆ. ಪ್ರಸ್ತುತ 73 ಅಭ್ಯರ್ಥಿಗಳ ಪೈಕಿ 18 ಅಭ್ಯರ್ಥಿಗಳಿಗೆ ಮಾತ್ರ ನೇಮಕಾತಿ ಆದೇಶ ಹೊರಡಿಸಲಾಗಿರುತ್ತದೆ. ಈಗಾಗಲೇ ಭಾರತ ಸರ್ಕಾರವು ಈ ಎಲ್ಲಾ 73 ಅಭ್ಯರ್ಥಿಗಳಿಗೆ ವೃತ್ತಿ ತರಬೇತಿಯನ್ನು ವಿವಿಧ ತರಬೇತಿ ಕೇಂದ್ರಗಳಿಗೆ ನಿಯೋಜಿಸಲಾಗಿರುತ್ತದೆ. ತರಬೇತಿ

ಪ್ರಾರಂಭವಾಗುವ ದಿನಾಂಕಕ್ಕೆ ಅನುಗುಣವಾಗಿ ನೇಮಕಾತಿ ಆದೇಶಗಳನ್ನು ಹೊರಡಿಸಲಾಗುವುದು. ಹೀಗಾಗಿ, ಆಯ್ಕೆಗೊಂಡ ಎಲ್ಲಾ ಅಭ್ಯರ್ಥಿಗಳ ಪರಸ್ಪರ ಜೇಷ್ಠತೆಯು ಉಲ್ಲೇಖ (3) ರಲ್ಲಿ ಪ್ರಕಟಗೊಂಡ ಅಂತಿಮ ಆಯ್ಕೆ ಪಟ್ಟಿಯಲ್ಲಿ ಪಡೆದಿರುವ ಮೆರಿಟ್ ಆಧಾರದ ಮೇರೆಗೆ ನಿಗಧಿಗೊಳಿಸಲಾಗುವುದು ಎಂಬುದನ್ನು ಮತ್ತೊಮ್ಮೆ ತಿಳಿಸಲಾಗಿದೆ.

10. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕರ್ನಾಟಕ ಫಾರೆಸ್ಟ್ ಅಕಾಡೆಮಿ, ಗುಂಗರಗಟ್ಟಿ, ಧಾರವಾಡ ಇವರು ನೇಮಕಾತಿ ಹೊಂದಿರುವ 18 ವಲಯ ಅರಣ್ಯಾಧಿಕಾರಿಗಳನ್ನು ದಿನಾಂಕ: 25.11.2019 ರಿಂದ ಪ್ರಾರಂಭವಾಗುವ ವೃತ್ತಿ ತರಬೇತಿಗೆ ಸದರಿ ಅಭ್ಯರ್ಥಿಗಳನ್ನು Uttarakhand Forestry Training Academy, Haldwani (Uttarakhand) ಇಲ್ಲಿ ನಿಗಧಿತ ದಿನಾಂಕಕ್ಕಿಂತ ಮುಂಚಿತವಾಗಿ ಹಾಜರಾಗಲು ತಿಳುವಳಿಕೆ ನೀಡಿ, ಕರ್ತವ್ಯದಿಂದ ಕಾರ್ಯವಿಮುಕ್ತಿಗೊಳಿಸುವುದು.

11. ಕರ್ನಾಟಕ ಅರಣ್ಯ ಲೆಕ್ಕ ಸಂಹಿತೆ ನಿಯಮ 20 ರ ಪ್ರಕಾರ ನೇರ ನೇಮಕಾತಿಯಿಂದ ಆಯ್ಕೆಯಾಗುವ ವಲಯ ಅರಣ್ಯಾಧಿಕಾರಿಗಳಿಂದ ಒಂದು ವರ್ಷದ ವೇತನವನ್ನು ಭದ್ರತಾ ಠೇವಣಿಯನ್ನಾಗಿ ವಸೂಲು ಮಾಡಬೇಕಾಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ವೇತನ ಬಟವಡೆ ಅಧಿಕಾರಿ (ಡಿ.ಡಿ.ಓ) ಮೇಲಿನ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಂದ ಈ ಕೆಳಕಂಡಂತೆ ಒಂದು ವರ್ಷದ ಮೂಲವೇತನವನ್ನು ಭದ್ರತಾ ಠೇವಣಿಯನ್ನಾಗಿ ವಸೂಲು ಮಾಡುವುದು.

    ಅ. ಒಂದು ವರ್ಷ ಮೂಲ ವೇತನದ ಶೇ. 25 ರ ಭಾಗದಲ್ಲಿ ಶೇಕಡಾ 6¼ ಭಾಗವನ್ನು ಮೊದಲ ತಿಂಗಳ ವೇತನದಲ್ಲಿ ನಗದಾಗಿ ವಸೂಲು ಮಾಡಿ ಭದ್ರತಾ ಠೇವಣಿಯನ್ನಾಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ), ಬೆಂಗಳೂರು ಎಂಬ ಪದನಾಮದಲ್ಲಿ ಇಡುವುದು.

    ಆ. ಉಳಿದ ಶೇಕಡಾ 18¾ ಭಾಗವನ್ನು ಮೂಲವೇತನದ ಶೇಕಡಾ 10 ರಷ್ಟು ಮೊತ್ತವನ್ನು ಪ್ರತಿ ತಿಂಗಳ ವೇತನದಲ್ಲಿ ಕಡಿತಗೊಳಿಸಿ ವಸೂಲಿ ಮಾಡುವುದು. ಹೀಗೆ ಮಾಡುವುದರಿಂದ ಒಟ್ಟು ಒಂದು ವರ್ಷ ಮೂಲವೇತನದ ಶೇಕಡಾ 25 ರಷ್ಟು ಭಾಗವನ್ನು ವಸೂಲಿ ಮಾಡಿದಂತಾಗುವುದು.

    ಇ. ಉಳಿದ ಶೇಕಡಾ 75 ರಷ್ಟು ಭಾಗವನ್ನು ನೌಕರರ ಇಚ್ಛಾನುಸಾರ ನಗದಾಗಿ ಇಲ್ಲವೇ ಕರ್ನಾಟಕ ಆರ್ಥಿಕ ಸಂಹಿತೆ 1958 ರ ನಿಯಮ 353 ರಿಂದ 359 ರಲ್ಲಿ ತಿಳಿಸಿರುವ ಪ್ರಕಾರ ವಸೂಲಿ ಮಾಡುವುದು.

ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಎಲ್ಲಾ ಆದೇಶಗಳಿಗೆ ಈ ನೇಮಕಾತಿ ಆದೇಶ ಒಳಪಟ್ಟಿರುತ್ತದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)
ಹಾಗೂ ನೇಮಕಾತಿ ಪ್ರಾಧಿಕಾರ

**ಸಂಖ್ಯೆ: ಬಿ9-ನೇಮಕಾತಿ-ವಿವ-3/2017-18**

ಸಂಬಂಧಿಸಿದ ಎಲ್ಲಾ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

**ಪ್ರತಿಯನ್ನು ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಈ ಕೆಳಕಂಡವರಿಗೆ ಸಲ್ಲಿಸಿದೆ:**

1. ಗೌರವಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮೌಲ್ಯ ಮಾಪನ, ಕಾರ್ಯಯೋಜನೆ ಮತ್ತು ತರಬೇತಿ, ಬೆಂಗಳೂರು
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕರ್ನಾಟಕ ಫಾರೆಸ್ಟ್ ಅಕಾಡಮಿ, ಗುಂಗರಗಟ್ಟಿ, ಧಾರವಾಡ
4. ಕಚೇರಿ ಆದೇಶದ ಕಡತಕ್ಕೆ
5. ಈ ಕಚೇರಿಯ ಬಿ1 ಶಾಖೆಗೆ
6. ಬಿಡಿ ಪ್ರತಿ